3. ಸರ್ಕಾರ ಇದರ ಬಗ್ಗೆ ಆಲೋಚಿಸಿ ಉಳಿದ ದೇವಾಲಯಗಳಿಗೂ ಹಣ ಕೊಡುವ ಕ್ರಮ ತೆಗೆದುಕೊಳ್ಳುವುದೆ? (ವಿವರ ನೀಡುವುದು)

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು) :—

1. ದೇವಾಲಯಗಳ ದುರಸ್ತಿಗಾಗಿ, ಸ್ಥಳೀಯ ಭಕ್ತಾದಿಗಳು ಮತ್ತು ಸಾರ್ವಜನಿಕರು ಮುಂದೆ ಬಂದು ಅಂದಾಜುಪಟ್ಟಿ ತಯಾರಿಸಿ ಅಂದಾಜು ಮೊತ್ತದಲ್ಲಿ ಅರ್ಧದಷ್ಟು ಸಾರ್ವಜನಿಕ ವಂತಿಕೆ ಸಂಗ್ರಹಿಸಿ ಉಳಿದ ಮೊತ್ತಕ್ಕೆ ನಿಯಮಾನುಸಾರ ಸರ್ಕಾರಿ ಅನುದಾನ ಕೋರಿ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿದಲ್ಲಿ ಪರಿಶೀಲಿಸಲಾಗುವುದು.

2. ಆಯ-ವ್ಯಯದಲ್ಲಿ ಒದಗಿಸಿರುವ ಮೊತ್ತಕ್ಕೆ ಮಿತಿಗೊಳಿಸಿ ಬೇಡಿಕೆಯ ಆದ್ಯತೆಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುವುದು.

3. ಭಕ್ತಾದಿಗಳೇ ಮುಂದೆ ಬಂದಲ್ಲಿ ಮಾತ್ರ ಇಂತಹ ಸಮಸ್ಯೆ ನಿವಾರಿಸಬಹುದಾಗಿದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಹಳದಿ ಕಾರ್ಡು ವಿತರಣೆ

2378(2819)ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಹಸಿರು ಕಾರ್ಡುಗಳನ್ನು ಬದಲಾವಣೆ ಮಾಡಿ, ಹಳದಿ ಕಾರ್ಡುಗಳನ್ನು ಕೊಡುವ ಕಾರ್ಯಕ್ರಮ ಪ್ರಾರಂಭ ಆಗಿದೆಯೇ;

ಆ) ಹಾಗಿದ್ದಲ್ಲಿ, ತುರುವೇಕೆರೆ ತಾಲ್ಲೂಕಿನಲ್ಲಿ ಹಳದಿ ಕಾರ್ಡು ಯಾವಾಗ ಕೊಡಲಾಗುವುದು;

ಇ) ಈಗ ಹಳದಿ ಕಾರ್ಡು ಕೊಡಲು ಸರ್ಕಾರ ಯೋಚಿಸಿರುವ ಬಡವರ ಸಂಖ್ಯೆ ಎಷ್ಟು;

ಈ) ಯಾವ ಆಧಾರದ ಮೇಲೆ ಈ ಬಡವರ ಪಟ್ಟಿ ಮಾಡಲಾಗಿದೆ;

ಉ) ಸರಿಯಾದ ರೀತಿಯಲ್ಲಿ ಸಮೀಕ್ಷೆ ಮಾಡಿ ಬಡವರನ್ನು ಗುರುತಿಸಿ ಪಟ್ಟಿ ಮಾಡಲಾಗಿದೆಯೇ?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :—

ಅ) ಪ್ರಾರಂಭವಾಗಿದೆ.

ಆ) ತುರುವೇಕೆರೆ ತಾಲ್ಲೂಕಿನಲ್ಲಿ ಸಹ ಹಳದಿ ಕಾರ್ಡುಗಳನ್ನು ನೀಡಲು ಗ್ರಾಮಸಭೆಗಳಲ್ಲಿ ಫಲಾನುಭವಿಗಳನ್ನು ಗುರುತಿಸುವ ಪ್ರಕ್ರಿಯೆಯು ನಡೆಯುತ್ತಿದ್ದು, ಶೀಘ್ರದಲ್ಲಿಯೇ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು.

ಇ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯವರು 1997-98 ನೇ ಸಾಲಿನಲ್ಲಿ ಬಡತನ ರೇಖೆ ಕೆಳಗಿನ ಕುಟುಂಬಗಳ ಬಗ್ಗೆ ನಡೆದ ಸಮೀಕ್ಷೆಯನ್ನು ಆಧರಿಸಿ ತಯಾರಿಸಿದ ಪಟ್ಟಿಯನ್ನು ಆಯಾ ಗ್ರಾಮದ ಗ್ರಾಮ ಸಭೆಗಳಲ್ಲಿ ಪರಿಶೀಲನೆಗೊಳಪಡಿಸಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳನ್ನು ಗುರುತಿಸಲಾಗುತ್ತಿದೆ.

ಈ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರಿಂದ ನಡೆಸಿದ ಸಮೀಕ್ಷೆಯು ಕೆಲವು ಲೋಪದೋಷಗಳಿಂದ ಕೂಡದೆ ಎಂದು ಬಂದ ದೂರುಗಳ ಹಿನ್ನೆಲೆಯಲ್ಲಿ ಗ್ರಾಮ ಸಭೆಗಳಲ್ಲಿ ಸದರಿ ಸಮೀಕ್ಷೆ ಮೂಲಕ ಸಿದ್ಧಪಡಿಸಿದ ಪಟ್ಟಿಯಲ್ಲಿನ ಅರ್ಹ ಫಲಾನುಭವಿಗಳನ್ನು ಪರಿಶೀಲನೆಗೊಳಪಡಿಸಿ ಅರ್ಹ ಕುಟುಂಬಗಳನ್ನು ಗುರುತಿಸುವುದರ ಜೊತೆಗೆ ಪಟ್ಟಿಯಲ್ಲಿ ಇಲ್ಲದ, ಆದರೆ ಗ್ರಾಮಸಭೆಗಳ ಪ್ರಕಾರ ಅರ್ಹರೆಂದು ಕಂಡುಬಂದ ಫಲಾನುಭವಿಗಳ ಪಟ್ಟಿಯನ್ನೂ ಸಹ ಪ್ರತ್ಯೇಕವಾಗಿ ಸಿದ್ಧಪಡಿಸಲಾಗುತ್ತಿದೆ. ಈ ಪ್ರತ್ಯೇಕ ಪಟ್ಟಿಗೆ ಸಂಬಂಧಿಸಿದಂತೆ ಇಡೀ ರಾಜ್ಯದ ಮಾಹಿತಿ ಲಭ್ಯವಾದ ನಂತರ, ಈ ಬಗ್ಗೆ ರಾಜ್ಯ ಸರ್ಕಾರ ನಿರ್ಧಾರ ಕೈಗೊಳ್ಳುವುದು.

ತುರುವೇಕೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಕೆರೆಕಟ್ಟೆಗಳು

2379(2820) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) :— ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ವ್ಯಾಪ್ತಿಗೆ ಬರುವ ಕೆರೆಗಳೆಷ್ಟು? ಅಣೆಕಟ್ಟುಗಳು ಯಾವುವು, ಏಕಪ್‌ಗಳು ಯಾವುವು?

ಆ) ಕಳೆದ ಮೂರು ವರ್ಷಗಳಲ್ಲಿ ದುರಸ್ತಿಯಾದ ಕೆರೆಗಳಾವುವು? ಈ ಕೆರೆಗಳಲ್ಲಿ ಎಷ್ಟು ಅಣೆಕಟ್ಟು ಕಟ್ಟಲಾಯಿತು? ಏಕಪ್‌ಗಳು ಎಷ್ಟು ನಿರ್ಮಾಣ ಆಗಿವೆ;

ಇ) ಈ ವರ್ಷ ಜನರಿಂದ ಎಷ್ಟು ಕೆಲಸಕ್ಕೆ ಅರ್ಜಿ ಇದೆ.

ಈ) ಈ ಸಾಲಿನ ಆಯವ್ಯಯದಲ್ಲಿ ಎಷ್ಟು ಹಣವನ್ನು ಅಣೆಕಟ್ಟು ಮತ್ತು ಏಕಪ್‌ಗಳಿಗಾಗಿ ಇಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು?)

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳು-3 ಮತ್ತು ಅಣೆಕಟ್ಟು ಏಕಪ್‌ಗಳು-2, ಅವು ಯಾವುವೆಂದರೆ ಅಬೂಕನಹಳ್ಳಿ ಕೆರೆ, ಗೊಟ್ಟಿಕೆರೆ, ತುಯಿಲಹಳ್ಳಿ ಕೆರೆ ಹಾಗೂ ಪುರಅಣೆ ಹಾಗೂ ಡೊಂಕಿಹಳ್ಳಿ ಅಣೆ.